ಇದರಲ್ಲಿ ಮಕ್ಕಳು ತೆಗೆದ ಚಿತ್ರಗಳನ್ನು ಬಳಸಲಾಗಿದೆ.

ಬಾಲಬಳಗ



# ಚಿಗುರು ಚಿಲುಮೆ

chiguruchilume@gmail.com

September 15

Volume 01 Issue 02




ಮಿಂಚು ಕುಲಕರ್ಣಿ

hoominchu@gmail.com





Dear all,

We are presenting to you the second issue of 'Chiguru Chilume'! First of all thanks to all of you for encouraging us by sending your feedback and input. That's great support for us and we are always happy to get more ideas from you all and to have more members in our team.

Though we had planned a lot for the first issue, due to some technical and logistical issues we were not able to bring it to the expected level and it is always better to have a simple start than trying to put everything in the first effort itself. We were also not sure about the language in which the newsletter should be written. We wanted both Kannada and English but the problem is that we cannot keep translating everything into English or Kannada, as it involves a lot of work. More importantly the work doesn't remain original anymore. We have decided to use the articles, write-ups, poems, etc. in the same language as the author has written it in. If you know only one language and don't know the other, then we hope that this newsletter can help you learn a new language altogether!





In this issue we will be introducing to you the concept of 'Mentors' which will help the students as well as the parents in many ways. For example, if a child writes an article but is not satisfied with it, then he/she can contact the respective mentors and get their input, thus improving his/ her writing skills. It is a good opportunity of learning for the mentors as well. We are making a list of fields/ hobbies and also making a list of the people we know who are experts in various fields. This list has writing, reading, painting, crafts, origami, kitchen garden, computers, photography, snakes, trekking, movies and pretty much everything that one can think of ! We will talk to these mentors and with their consent; we will be including their name in our 'Mentors List' which we will be publishing in the newsletter as well as putting it on the school notice board with their contact details. Interested students and parents can co-ordinate a sit-down with them directly. This will be very helpful for the people who want to learn something but don't know any instructors, and even if they know, the instructors are not often easily available. Thanks to Varsha moushi for letting us use her pictures and for being the first person on our 'Mentors List'. Her kitchen garden looks really tempting… what are you waiting for? Grab your phone and give her a call!



# ಎರಡು ಝೆನ್ ಕಥೆಗಳು

ಕಥೆ ೧

## ಆಚೆ ದಡ

ಒಂದು ಸಲ ಒಬ್ಬ ಯುವ ಬೌದ್ಧ ಭಿಕ್ಷು ಪ್ರಯಾಣ ಮಾಡುತ್ತಾ ಒಂದು ನದಿಯ ದಡ ತಲುಪಿದ. ಭರ ಪೂರ ನದಿಯನ್ನು ನೋಡಿ ಯುವ ಭಿಕ್ಕುವಿಗೆ ನಿರಾಶೆಯಾಯಿತು. ಪ್ರವಾಹ ಇಳಿಯಬಹುದು ಎಂದು ಹಲವಾರು ಗಂಟೆ ಕಾಲ ಕಾದ. ಪ್ರವಾಹ ಇಳಿಯಲಿಲ್ಲ. ಇನ್ನೇನು ತನ್ನ ಗುರುವನ್ನು ಕಾಣಲು ಹೋಗುವ ಪ್ರವಾಸವನ್ನು ಅಲ್ಲಿಗೇ ಮೊಟಕುಗೊಳಿಸಿ ಹಿಂದಿರುಗಬೇಕು ಎನ್ನುವಷ್ಟರಲ್ಲಿ ನದಿಯ ಆಚೆ ದಡದ ಮೇಲೆ ತನ್ನ ಗುರು ಪ್ರಶಾಂತನಾಗಿ ಕುಳಿತಿರುವುದು ಕಂಡಿತು. ಭಾರೀ ಆನಂದ ತುಂದಿಲನಾದ ಭಿಕ್ಕು ಜೋರಾಗಿ ಕೂಗಿ ಹೇಳಿದ,``ಗುರುಗಳೇ, ಈ ನದಿಯ ಆಚೆ ದಡ ತಲುಪುವುದು ಹೇಗೆ ಅಂತ ಹೇಳ್ತೀರಾ?.

ಗುರುವು ಚಣ ಕಾಲ ಯೋಚಿಸಿ, ನದಿಯನ್ನು ಅಳೆಯುವವನಂತೆ ಆಚೀಚೆ ನೋಡಿ, ಯುವ ಭಿಕ್ಕುವಿಗೆ ಕೂಗಿ ಹೇಳಿದ, ``ಮಗು, ನೀನು ಈಗಾಗಲೆ ಆಚೆ ದಡದಲ್ಲೇ ಇದ್ದೀಯಲ್ಲಾ!

ಕಥೆ ೨

## ಕೋಡಿ ಹರಿಯಿತು!

ಝೇನ್ ಗುರು ಬಂಕೇಯಿ `ಏಕಾಂತಧ್ಯಾನ' ಶಿಬಿರಗಳನ್ನು ಆಗೀಗ ಏರ್ಪಡಿಸುತ್ತಿದ್ದ. ಆಗೆಲ್ಲ ಜಪಾನಿನ ಬೇರೆ ಬೇರೆ ಭಾಗಗಳಿಂದ ಅನೇಕ ಆಸಕ್ತ ಶಿಷ್ಯರು ಶಿಬಿರಗಳಲ್ಲಿ ಭಾಗವಹಿಸುತ್ತಿದ್ದರು. ಇಂಥದೊಂದು ಶಿಬಿರದಲ್ಲಿ ಒಬ್ಬ ಶಿಷ್ಯ ಕಳುವು ಮಾಡುತ್ತಿರುವಾಗಲೇ ಸಿಕ್ಕಿ ಬಿದ್ದ. ಉಳಿದ ಶಿಷ್ಯರೆಲ್ಲ ಹೋಗಿ ಗುರು ಬಂಕೇಯಿಗೆ ದೂರು ಸಲ್ಲಿಸಿ ಅಂಥ ಕಳ್ಳಶಿಷ್ಯನನ್ನು ಶಿಬಿರದಿಂದ ಹೊರಹಾಕಲು ಕೇಳಿಕೊಂಡರು. ಬಂಕೇಯಿ ಅವರ ಕೋರಿಕೆಯನ್ನು ಮನ್ನಿಸಲಿಲ್ಲ.

ಕೆಲದಿನಗಳ ಬಳಿಕ ಮತ್ತೆ ಅದೇ ಬಗೆಯ ಘಟನೆಗಳು ನಡೆದವು. ಆಗಲೂ ಬಂಕೇಯಿ ಕಳುವು ಮಾಡುತ್ತಿದ್ದ ಶಿಷ್ಯನನ್ನು ಹೊರಹಾಕಲಿಲ್ಲ. ಇದರಿಂದ ಉಳಿದ ಶಿಷ್ಯರು ಕುಪಿತರಾದರು. ಎಲ್ಲರೂ ಸೇರಿ ಮನವಿಯೊಂದನ್ನು ಸಿದ್ದಗೊಳಿಸಿ,`ಇಂಥ ಕಳನ್ನನ್ನು ಹೊರಹಾಕದಿದ್ದರೆ ನಾವೇ ಎಲ್ಲರೂ ಸಾಮೂಹಿಕವಾಗಿ ಹೊರಹೋಗುತ್ತೇವೆ' ಎಂದು ತಿಳಿಸಿದರು.

ಮನವಿಯನ್ನು ಓದಿದ ಬಂಕೇಯಿ ಎಲ್ಲರನ್ನೂ ತನ್ನ ಬಳಿ ಕರೆಸಿ ಶಾಂತನಾಗಿಯೇ ಹೇಳಿದ, ನೀವು ಎಲ್ಲರೂ ತುಂಬ ವಿವೇಕ ಉಳ್ಳವರಾಗಿದ್ದೀರಿ. ಯಾವುದು ಸರಿ, ಯಾವುದು ಸರಿ ಅಲ್ಲ ಎಂದು ತಿಳಿಯುವ ವಿವೇಚನಾ ಶಕ್ತಿ ನಿಮಗೆ ಇದೆ. ಇಂತಹ ನೀವು ಬೇರೆ ಎಲ್ಲಿಯಾದರೂ ಹೋಗಬಹುದು; ಕಲಿಯಬಹುದು. ಆದರೆ, ಈ ಬಡ ಸೋದರನಿಗೆ ಯಾವುದು ಸರಿ ಯಾವುದು ತಪ್ಪು ಎಂದು ತಿಳಿಯುವ ಶಕ್ತಿ ಇಲ್ಲ. ಇಂಥವನಿಗೆ ನಾನು ಕಲಿಸಲಾರೆನಾದರೆ ಬೇರೆ ಯಾರು ಕಲಿಸಲು ಸಾಧ್ಯ? ಇವನನ್ನು ಇಲ್ಲಿಯೇ ಇಟ್ಟುಕೊಳ್ಳುತ್ತೇನೆ - ನೀವು ಎಲ್ಲರೂ ಹೊರ ಹೋದರೂ ಸಹ.

ಕಳುವು ಮಾಡಿದ ಸೋದರರನ ಕಣ್ಣಿಂದ ಕಣ್ಣೀರ ಕೋಡಿ ಹರಿಯಿತು. ಕಳುವು ಮಾಡಬೇಕು ಎಂಬ ಆಸೆ ಅದರೊಂದಿಗೆ ಕೊಚ್ಚಿಕೊಂಡು ಹೋಯಿತು.

ಅನುವಾದ: ಶಿವಾನಂದ ಹೊಂಬಳ, ಪಾಲಕರು

shivahombal@gmail.com

## 'ಪ್ರತಿಭಾ ಕಾರಂಜಿ' ಒಂದು ವರದಿ.

'ಪ್ರತಿಭಾ ಕಾರಂಜಿ' ಪದವು ಶಾಲಾ ಶಿಕ್ಷಣದ ಪರಿಚಯವಿರುವವರಿಗೆ ಅತ್ಯಂತ ಚಿರಪರಿಚಿತ. ಮಕ್ಕಳಲ್ಲಿರುವ ಪ್ರತಿಭೆಯ ಪ್ರದರ್ಶನಕ್ಕೆ ಇದೊಂದು ಅವಕಾಶ. ಶಿಕ್ಷಣ ಇಲಾಖೆ ಆಯೋಜಿಸುವ ಈ ಕಾರ್ಯಕ್ರಮ ಕ್ಲಸ್ಟರ್ ಅಂದರೆ ಗುಂಪು ಮಟ್ಟದಿಂದ ಪ್ರಾರಂಭವಾಗಿ ತಾಲೂಕು, ಜಿಲ್ಲೆ ಹಾಗೂ ರಾಜ್ಯಮಟ್ಟದವರೆಗೆ ಆಯಾ ಊರಿನ ಬೇರೆ ಬೇರೆ ಶಾಲೆಗಳಲ್ಲಿ ನಡೆಯುತ್ತದೆ. ಸುಮಾರು ೧೨-೧೩ ವರ್ಷಗಳಿಂದ ನಾವು ಈ ಪ್ರತಿಭಾ ಕಾರಂಜಿಯಲ್ಲಿ ಭಾಗವಹಿಸುತ್ತಿದ್ದೇವೆ.
ನಮ್ಮ ಮಕ್ಕಳು ಹಲವರು ಬಹುಮಾನಗಳನ್ನು ಪಡೆದು ರಾಜ್ಯಮಟ್ಟದವರೆಗೂ ಆಯ್ಕೆಯಾಗಿದ್ದಾರೆ. ಈ ವರ್ಷದ ವಿಶೇಷ ಎಂದರೆ ಮೊದಲ ಬಾರಿಗೆ ನಮ್ಮಶಾಲೆಯಲ್ಲಿಯೇ ಈ 'ಪ್ರತಿಭಾ ಕಾರಂಜಿ'ಕಾರ್ಯಕ್ರಮವನ್ನುಆಯೊಜಿಸಿದ್ದು. ಕಳೆದ ವರ್ಷವೇ ಚರ್ಚೆಯಾಗಿ ಈ ವರ್ಷ ಈ ಜವಾಬ್ದಾರಿ ನಮ್ಮ ಪಾಲಿಗೆ ಬಂದಿತು.ಮೊದಲಿಗೆ ಸ್ವಲ್ಪ ಅನುಮಾನ, ಭಯಗಳುಂಟಾದರೂ 'ಒಗ್ಗಟ್ಟೇ' ಬಲ ಎಂಬ ನಂಬಿಕೆಯಿಂದ ಒಪ್ಪಿಕೊಂಡು,ಸಿದ್ಧತೆಯನ್ನು ಪ್ರಾರಂಭಿಸಿದೆವು. ಶಿಕ್ಷಕರು ಮತ್ತು ಪ್ರೌಢಶಾಲಾ ಮಕ್ಕಳು ಸೇರಿ ೧.೦೯. ೨೦೧೪ ಸೋಮವಾರದಂದು ನಮ್ಮ ಶಾಲೆಯಲ್ಲಿ ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ನೆರವೇರಿಸಿದೆವು. ಸುಮಾರು ೧೫-೧೬ ಶಾಲೆಯ ಮಕ್ಕಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಜನಪದ ನೃತ್ಯ, ಭರತ ನಾಟ್ಯ, ನಾಟಕ, ಚಿತ್ರಕಲೆ, ಆಶುಭಾಷಣ, ಮಣ್ಣಿನ ಮಾದರಿ, ಕಥೆ ಹೇಳುವುದು,ಧಾರ್ಮಿಕ ಪಠಣ, ವಿವಿಧ ಭಾಷೆಗಳಲ್ಲಿ ಪದ್ಯಗಳನ್ನು ಹೇಳುವುದು, ರಂಗೋಲಿ, ಯೋಗ, ರಸಪ್ರಶ್ನೆ ಹೀಗೆ ೨೬-೨೮ ವಿಷಯಗಳಲ್ಲಿ ಸ್ಪರ್ಧೆಗಳು ನಡೆದವು. ಒಂದೊಂದು ವಿಷಯಕ್ಕೆ ಒಂದೊಂದು ತರಗತಿಯನ್ನು ನಿಗದಿಪಡಿಸಿ ಬಾಲಬಳಗದ ಒಬ್ಬ ಶಿಕ್ಷಕರು ಮತ್ತು ಇಬ್ಬರು ಮಕ್ಕಳನ್ನು ವ್ಯವಸ್ಥೆಯ ಅನುಕೂಲಕ್ಕಾಗಿ ನಿಯಮಿಸಲಾಗಿತ್ತು. ಬೆಳಿಗ್ಗೆ ೧೦.೩೦ ಕ್ಕೆ ಸರಳ ಉದ್ಘಾಟನೆಯೊಂದಿಗೆ ಪ್ರಾರಂಭವಾದ ಈ ಕಾರ್ಯಕ್ರಮ ಮಧ್ಯಾಹ್ನ ೩.೩೦ಕ್ಕೆ ಮುಗಿಯಿತು. ಬಹುಮಾನ ಪಡೆದ ಮಕ್ಕಳಿಗೆ ಪ್ರಶಸ್ತಿಪತ್ರಗಳನ್ನು ಕೂಡ ವಿತರಿಸಲಾಯಿತು. ಅಂದು ಒಟ್ಟು ನಮ್ಮ ಶಾಲೆಗೆ ಹೊರಗಿನಿಂದ ಸುಮಾರು ೨೦೦ ಮಕ್ಕಳು ಹಾಗೂ ೨೫ ರಿಂದ ೩೦ ಶಿಕ್ಷಕರು ಬಂದಿದ್ದರು. ಬೇರೆ ಬೇರೆ ಕ್ಲಸ್ಟರಗಳ ಸಮೂಹ ಸಂಪನ್ಮೂಲ ವ್ಯಕ್ತಿಗಳು ಕೂಡ ಶಾಲೆಗೆ ಭೇಟಿ ನೀಡಿದರು ಎಲ್ಲರಿಗೂ ಬಾಲಬಳಗ ಆವರಣದ ಸಹಜತೆ, ಹಸಿರು ಹಾಗೂ ವ್ಯವಸ್ಥೆಗಳು ಇಷ್ಟವಾದವು. ಕಾರ್ಯಕ್ರಮದ ಆಯೋಜನೆ ಚೆನ್ನಾಗಿತ್ತು ಎಂದು ಅನೇಕರು ತಮ್ಮ ಅಭಿಪ್ರಾಯವನ್ನು ವಕ್ತಪಡಿಸಿದರು. ಸುಧಾರಿಸಬೇಕಾದ ಹಲವಾರು ಅಂಶಗಳಿದ್ದರೂ ಬಂದವರಾರೂ ಅವುಗಳನ್ನು ಕೊರತೆ ಎಂದು ಭಾವಿಸಲಿಲ್ಲ.

ಇದರೊಡನೆ ಮಳೆರಾಯನ ಸಹಕಾರವಂತೂ ನೆನೆಯಬೇಕಾದದ್ದೇ. ಬೆಟ್ಟದಂತೆ ಬಂದದ್ದು ಮಂಜಿನಂತೆ ಕರಗಿಹೋಯಿತು ಎಂಬ ಮಾತು ನಿಜವೆನಿಸಿತು. ಕಾರ್ಯಕ್ರಮ ಆಯೋಜನೆ ಮಾಡಿದ ತೃಪ್ತಿ ನಮಗಿದೆ.



## ಗಣಪತಿ ಹಬ್ಬದ ಸಂಭ್ರಮ- ವರದಿ

ಗಣಪತಿ ಹಬ್ಬದ ಆಚರಣೆಯ ನಂತರ ೭ನೇ ತರಗತಿಯ ಮಕ್ಕಳೊಂದಿಗೆ ಚರ್ಚಿಸಿದಾಗ ಅವರು ಹೇಳಿದ ಅಂಶಗಳನ್ನು ಅವರ ಮಾತಲ್ಲೇ ಕೇಳಿ.

1.ನಾವು ಆಗಸ್ಟ್ ಮೊದಲ ವಾರದಿಂದಲೇ ಗಣಪತಿ ಮೂರ್ತಿಗಳನ್ನು ಕರಕುಶಲತೆಯ ತರಗತಿಯಲ್ಲಿ ಮಾಡಲು ಆರಂಭಿಸಿದೆವು.

೨.ತರಗತಿಯಲ್ಲಿ ಎರಡು ಗುಂಪುಗಳನ್ನು ಮಾಡಿಕೊಂಡು ಒಂದು ಗುಂಪು ಗಣೇಶ ಮೂರ್ತಿಯನ್ನು ತಯಾರಿಸುವ ಜವಾಬ್ದಾರಿಯನ್ನು, ಇನ್ನೊಂದು ಗುಂಪು ಅಲಂಕಾರದ ಜವಾಬ್ದಾರಿಯನ್ನು ತೆಗೆದುಕೊಳ್ಳಲು ಒಪ್ಪಿಕೊಂಡವು.

೩.ಪ್ರತಿಯೊಬ್ಬರೂ ೩ ರೂಪಾಯಿ ಪಟ್ಟಿ ಹಾಕಿ ಅಲಂಕಾರಕ್ಕೆ ಅವಶ್ಯಕ ಸಾಮಗ್ರಿಗಳನ್ನು ಕೊಂಡುತಂದೆವು.

೪. ಪ್ರತಿಯೊಬ್ಬರೂ ನಮ್ಮ ಗಣಪತಿಯನ್ನು ಹಾಗೂ ಅಲಂಕಾರವನ್ನು ತುಂಬಾ ಪ್ರಶಂಶಿಸಿದರು. ಅದರಿಂದ ನಮಗೆಲ್ಲಾ ಬಹಳ ಖುಷಿಯಾಗಿದೆ.

೫.ಒಬ್ಬರಿಗೊಬ್ಬರು ಸಹಕಾರ ನೀಡುವುದು ಜವಾಬ್ದಾರಿಯಿಂದ ಕೆಲಸ ನಿಭಾಯಿಸುವುದು ಅಲಂಕಾರ ಮಾಡುವುದು ಲೈಟಿನ ವ್ಯವಸ್ಥೆ ಮಾಡುವುದು,ಸ್ವಲ್ಪ ಜಗಳ ಬಿಡಿಸುವುದು ಹೀಗೆ ಈ ಸಂದರ್ಭದಲ್ಲಿ ನಾವು ಬಹಳಷ್ಟು ವಿಷಯಗಳನ್ನು ಕಲಿತೆವು.






## ಅಶೋಕ ಜೋಷಿ

ಶಿಕ್ಷಕರು

ashokjoshi960@gmail.com




ಬಾಲಗಣಪ - ಬಾಲಬಳಗದ
ಗಣಪ್ಪ ಬಂದ
ಹೊಟ್ಟೆ ಮ್ಯಾಲೆ ಗಂಧ
ಕಾಯಿ ಕಡಬು ತಿಂದ
ಭಾವ್ಯಾಗ ಬಿದ್ದಾ ಮುಣಗಿ ಮುಣಗಿ ಎದ್ದ !!

ಕೇವಲ ಕೆಲ ದಶಕಗಳ ಹಿಂದೆ ಗಣಪತಿ ಹಬ್ಬ ಬಂತೆಂದರೆ ಅದು ಮುಗಿಯುವವರೆಗೂ ಗಲ್ಲಿ ಗಲ್ಲಿಗಳಲ್ಲಿ ಚಿಣ್ಣರು ಕೇಕೆ ಹಾಕುತ್ತ ಹಾಡುತ್ತಿದ್ದ ಅನ್ನುವುದಕ್ಕಿಂತ  ಅವರಿಗೆ ತಿಳಿದಂತೆ ಶಕ್ತಿಯಿದ್ದಷ್ಟು ತಾರಕ ಸ್ವರದಲ್ಲಿ ಚೀರುತ್ತ ರಸ್ತೆ ತುಂಬ ಓಡಾಡುವ ದೃಶ್ಯ ಸಾಮಾನ್ಯವಾಗಿತ್ತು. ಪಟಾಕಿಗರ ಶಬ್ದ ಲೌಡ ಸ್ಪೀಕರಗಳ ಹಾವಳಿ ಕಡಿಮೆ ಇದ್ದ ದಿನಗಳು ಅವು . ನೃತ್ಯ , ನಾಟಕ , ಮಿಮಿಕ್ರಿ , ಆಟಗಳು , ಗಣೇಶೋತ್ಸವಕ್ಕೆ ಕಳೆಕಟ್ಟುತ್ತಿದ್ದವು. ಇದಕ್ಕೆ ಸ್ವಲ್ಪ ಸಾಮ್ಯತೆಯಿರುವ ವಾತಾವರಣ ಗಣೇಶೋತ್ಸವಕ್ಕೆ ಕೆಲದಿನಗಳ ಹಿಂದೆ ಬಾಲಬಳಗದಲ್ಲಿತ್ತು. ಚಿಣ್ಣರ ಕೇಕೆ, ಗಲಭೆ ಚೀರಾಟ  ಎಲ್ಲ ೧೫-೨೦ ದಿನ ಮೊದಲು ಶಾಲೆಯಲ್ಲಿ ಶುರುವಾಗಿದ್ದವು .
ಪಾರ್ವತಿ ತನ್ನ ಮೈಯಲ್ಲಿಯ ಮಣ್ಣಿನಿಂದ ಗಣಪತಿಯನ್ನು ತಯಾರಿಸಿ ಬಾಗಿಲು ಕಾಯಲು ಕೂಡಿಸಿದ್ದು,ಅಲ್ಲಿ ಬಂದ ಅವರ ಜೊತೆ  ಅಪ್ಪನ  ತುಂಟ ಗಣಪ , ತಂಟೆ ತೆಗೆದು , ತಲೆ  ಹಾರಿಸಿಕೊಂಡು ಆನೆ ಮುಖದವನಾಗಿದ್ದು ಪ್ರಪಂಚಕ್ಕೆ ಗೊತ್ತಿರುವ ಕಥೆ. ನಮ್ಮ ಶಾಲೆಯ ಮಕ್ಕಳು ಸ್ವಯಂ ಪ್ರೇರಿತರಾಗಿ ಶಾಲೆಯ ಆವರಣದಲ್ಲಿರುವ ಮಣ್ಣನ್ನೇ ಹುಡುಕಿ ತೆಗೆದು ೧ ರಿಂದ ೭ನೆ ತರಗತಿಯ ವರೆಗಿನ ಪ್ರತಿ ಕ್ಲಾಸಿನ ಮಕ್ಕಳು, ಕ್ಲಾಸಿಗೊಂದರಂತೆ ಏಳು ಗಣಪತಿ ಸಿದ್ದಮಾಡಿದರು. ಗಣಪತಿ ತಯಾರಿಕೆ ಸಾಮೂಹಿಕವಾಗಿ ನಡೆಯಿತು.

ಎಲ್ಲರೂ ಮಾರ್ಗದರ್ಶಕರು, ಸೃಷ್ಟಿಕರ್ತರು ' ಗಣಪತಿ ಮಾಡ್ಲಿಕ್ಕೆ ಹೋಗಿ ಅವರಪ್ಪನ್ ಮಾಡಿದ ' ಎನ್ನುವ ಮಾತನ್ನು ಸುಳ್ಳು ಮಾಡಿದ ಚಿಣ್ಣರು ತಮ್ಮ ಶಕ್ತಿಗೂ ಮೀರಿ ಸುಂದರ ಗಣಪತಿಯನ್ನು ತಯಾರಿಸಿದರು. ಶಾಲೆಯ ಪ್ರತಿ ಮಾಮಾ, ಮೌಶಿಗಳಿಗೆ ಗಣಪತಿ ತೋರಿಸಿ ಸಂತೋಷಪಟ್ಟ ಮಕ್ಕಳು “ಇವ್ನ ನಾವು ಮಾಡಿದ ಗಣಪತಿ” ಅಂತ ಹೆಮ್ಮೆಯಿಂದ ಹೇಳಿ ಖುಷಿ ಪಟ್ಟರು.
ಈ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಶಿಕ್ಷಕರ ದಿನಾಚರಣೆ ಸಂದರ್ಭದಲ್ಲಿ ಮಕ್ಕಳಿಗೆ ಹೇಳಿದ ಮಾತು ನೆನಪಿಗೆ ಬರುತ್ತದೆ "ಮಕ್ಕಳೇ ನಿಮ್ಮಲ್ಲಿ ತುಂಟತನ ಸಹಾ ಇರಲಿ ನಿಮ್ಮಲಿನ  ಬಾಲಕ ಸದಾ ನಿಮ್ಮೊಂದಿಗಿರಲಿ ಎಂದಿದ್ದರು ಮೋದಿ . ಮಕ್ಕಳಲ್ಲಿ ಏನೆಲ್ಲಾ ಶಕ್ತಿ ಇದೆ . ಸ್ವಾತಂತ್ರ್ಯ ಕೊಟ್ಟರೆ ಅವರು ಎನೆನ್ನಾದರೂ ಸಾಧಿಸಬಲ್ಲರು. ಆದರೆ ಈ ಭಾಗ್ಯ ದೇಶದ ಲಕ್ಷಾಂತರ ಮಕ್ಕಳಿಗೆ ಇಲ್ಲ . ಸ್ವಾತಂತ್ರ್ಯ ಮತ್ತು ಸ್ವೇಚ್ಚೆ ಎರಡರ ನಡುವಿನ ಕೂದಲೆಳೆಯಷ್ಟು ಅಂತರವನ್ನು ಪಾಲಕರು ಮತ್ತು ಮಕ್ಕಳು ಸ್ಪಷ್ಟವಾಗಿ ತಿಳಿದುಕೊಂಡಾಗ ಸಾಧನೆಯ ಮಾರ್ಗ ಸುಲಭವಾದೀತು. ಆಗ ಇಂದಿನ ಮಕ್ಕಳು ದೇಶದ ಮುಂದಿನ ಆಸ್ತಿ  ಆಗುವದರಲ್ಲಿ ಸಂಶಯವಿಲ್ಲ.



## ಸೌಜನ್ಯಾ ಇನಾಮದಾರ

8th standard

ಮಳೆಗಾಲವೆಂದರೆ  ನನ್ನ ಅಚ್ಚುಮೆಚ್ಚಿನ ಕಾಲವೂ ಹೌದು ಮತ್ತು ಬೇಡವಾದ ಕಾಲವು ಹೌದು. ಏಕೆಂದರೆ ಮಳೆಗಾಲ ಒಳ್ಳೆಯದೂ ಹೌದು,ಕೆಟ್ಟದ್ದು ಹೌದು. ಮಳೆ ರೈತರಿಗೆ ಬೆಳೆ ಬೆಳೆಯಲು ಪೂರಕವಾಗಿದೆ. ಸುತ್ತ ಮುತ್ತಲಿನ ಜಾಗವು ಹಸಿರಿನಿಂದ ಕೂಡಿರುತ್ತದೆ . ಇದನ್ನು ನೋಡಲು ಎರಡು ಕಣ್ಣುಗಳು ಸಾಲವು . ಮಳೆ ಎಂದರೆ ಮಕ್ಕಳಿಗೆ ಖುಷಿಯೋ ಖುಷಿ . ಮಳೆಗಾಲದಲ್ಲಿ ಮಳೆಯಲ್ಲಿ ಛತ್ರಿ ಹಿಡಿದುಕೊಂಡು ನಡೆಯುವುದೆಂದರೆ ಸಂತಸದ ಕೆಲಸ. ಆಣೆಕಲ್ಲನ್ನು ಆರಿಸಿಕೊಂಡು ತಿನ್ನುವುದು ಆನಂದ ಕೊಡುವ ವಿಷಯ .ಮಳೆಯಲ್ಲಿ ನೆನೆದುಕೊಂಡು ಮನೆಯಲ್ಲಿ ಜಾರಿ ಬಿದ್ದು ಮನೆಯಲ್ಲಿ ಬೈಸಿಕೊಂಡು ಕೂಡುವುದು ಮೋಜು . ಮಳೆಯಿಂದ ಕೆರೆ ,ಬಾವಿ , ಹಳ್ಳ , ಕೊಳ್ಳಗಳು ತುಂಬಿ ತುಳುಕುತ್ತವೆ. ಈ ವರ್ಷದ ಗಣೇಶನಂತೂ ಮಳೆಯಲ್ಲೇ ಬಂದು ಮಳೆಯಲ್ಲೇ ಹೋದ .

ಮಳೆಯಿಂದ ಹಾನಿಯೂ ಇದೆ. ಜಾಸ್ತಿ ಮಳೆಯಿಂದ ಬೆಳೆಯೂ ನಾಶವಾಗುತ್ತದೆ. ಮಳೆಯಿಂದ ಪ್ರವಾಹವಾಗಿ ಊರೇ ನಾಶವಾಗುತ್ತದೆ . ದೂರದರ್ಶನದಲ್ಲಿ ತೋರಿಸಿದಂತೆಯೇ ಜಮ್ಮು-ಕಾಶ್ಮೀರದಲ್ಲಿ ಪ್ರವಾಹ ಬಂದಿದೆ. ರಾಸಾಯನಿಕ ಮಳೆಯಿಂದ ಜನರಿಗೆ ರೋಗ ಬರುವ ಸಂಭವ ಇರುತ್ತದೆ. ತಂಪಿನಿಂದ ಮಕ್ಕಳಿಗೆ ಜ್ವರ ,ನೆಗಡಿ, ಕೆಮ್ಮು  ಮುಂತಾದ ರೋಗಗಳು ಬರುತ್ತವೆ . ಮಳೆಯಿಂದ ಮನೆಗಳು ಸೋರುತ್ತವೆ. ಮಳೆಯಿಂದ ಸೊಳ್ಳೆಗಳು ಜಾಸ್ತಿ ಆಗುತ್ತವೆ. ಮಣ್ಣಿನ ಮನೆಗಳು ಬಿದ್ದೇ ಹೋಗುವ ಸಂಭವವಿರುತ್ತದೆ. ಮಕ್ಕಳಿಗೆ ಶಾಲೆಗೆ ಹೋಗಲು ತೊಂದರೆ ಆಗುತ್ತದೆ .ರಸ್ತೆಯಲ್ಲಿ ನೀರು ತುಂಬಿದರೆ ವಾಹನಗಳು ಸಾಗಲು ತೊಂದರೆ ಆಗುತ್ತದೆ .

ಇಷ್ಟೆಲ್ಲಾ ಆದರೂ ಮಳೆಗಾಲ ನನಗೆ ತುಂಬಾ ಇಷ್ಟ.

ಪರಿಸರ ಪರಿಸರ
ಈ ನಮ್ಮ ಪರಿಸರ
ಗಿಡಗಳ ಹಸಿರವ
ಪಶುಗಳ ಸಡಗರ
ನದಿ ಜಲಗಳ ಹೆಮ್ಮರ
ಜೀವ ಜಂತುಗಳ ಸರಸರ
ಈಗಾಗಿದೆ ವಿಷಕರ
ಗಾಳಿ ನೀರಿನ ಅಶುದ್ಧತೆ
ಜೀವಸಂಕುಲದ ಕ್ಷೀಣತೆ
ದೇವರ ಸೃಷ್ಟಿಯ ಕಣ್ಮರೆ
ಇದರ ಕಾರಣ ಮಾನವ
ಅವನ ದುರಾಸೆಗೆ ಎಲ್ಲಿದೆ ಕೊನೆ !!?

- ಮಾನಸಿ ೧೦ ನೇ ತರಗತಿ



## ಮಾನಸಿ

10th standard




ಸುರಭಿ ಕುಲಕರ್ಣಿ

inchara.kulkarni@gmail.com

1st year Law student




## 'ಕಳೆದ ಎರಡೂವರೆ ವರ್ಷಗಳ' ಬಾಲಬಳಗ ಶಿಕ್ಷಣ!!!

ನಾನು ಬಾಲಬಳಗದಲ್ಲಿದ್ದುದು ಹದಿಮೂರು ವರ್ಷಗಳ ಕಾಲ. ಅಲ್ಲಿಂದ ಹೊರ ಬಂದು ಸುಮಾರು ಎರಡೂವರೆ ವರ್ಷಗಳು ಕಳೆದಿವೆ. ಹಾಗಾಗಿ ಶೀರ್ಷಿಕೆಯನ್ನು ನೋಡಿ ಗೊಂದಲಕ್ಕೊಳಗಾಗಬೇಕಿಲ್ಲ.

ನನ್ನ ಪ್ರಕಾರ ೧೩ ವರ್ಷಗಳಲ್ಲಿ ಏನೆಲ್ಲಾ ಬಾಲಬಳಗದಲ್ಲಿ ನಾನು ಕಲಿತೆ ಎನ್ನುವುದನ್ನು ಹೇಳುವುದಕ್ಕಿಂತ, ಕಳೆದ ಎರಡೂವರೆ ವರ್ಷಗಳಲ್ಲಿ ಹೇಗೆ ಆ ಶಿಕ್ಷಣವು ನನ್ನನ್ನು ಪ್ರತಿಯೊಂದು ಕ್ಷಣವೂ ರಕ್ಷಿಸಿತು ಹಾಗೂ ಬೆಳೆಸಿತು ಎಂದು ಹೇಳುವುದು ಸೂಕ್ತ.ಬಾಲಬಳಗದಲ್ಲಿ ಇದ್ದಾಗ ಅಲ್ಲಿನ ಶಿಕ್ಷಣ ನನಗೆಂದೂ ಅತಿ ಮಹತ್ವದ್ದೆನಿಸಲಿಲ್ಲ. ನನ್ನ ಪ್ರಕಾರ ಅದು ಎಲ್ಲ ಶಾಲೆಗಳೂ ಕೊಡಲೇಬೇಕಾದ ಶಿಕ್ಷಣವಾಗಿತ್ತು. ಹೀಗಾಗಿ ಶಾಲೆಯನ್ನು ಸದಾ ಪ್ರೀತಿಸಿದವಳು ನಾನು. ಕೂಪಮಂಡೂಕದಂತಿದ್ದ ನನಗೆ ಹೊರಜಗತ್ತಿನಲ್ಲಿ ನಡೆಯುತ್ತಿರುವ ಘಟನೆಗಳ ಕನಿಷ್ಠ ಅರಿವಿತ್ತು. ಹತ್ತನೇ ತರಗತಿ ಮುಗಿಸಿ ಮುಂದಿನ ಶಿಕ್ಷಣಕ್ಕಾಗಿ ಕಾಲೇಜಿಗೆ ಹೋದ ಮೊದಲ ದಿನದಂದೇ ನಾನು ಶಾಲೆ ಹಾಗೂ ಅದರ ಮಹತ್ವವನ್ನು ಮನಗಂಡದ್ದು. ಎಷ್ಟೇ ಆದರೂ ಮನುಷ್ಯನ ಸಹಜ ಗುಣ ತಾನೆ, ಒಂದು ವಸ್ತುವು ತನ್ನಲ್ಲಿ ಇಲ್ಲದಿರುವಾಗಲೇ ಅದರ ಮಹತ್ವವನ್ನು ಅವನು ತಿಳಿಯುತ್ತಾನೆ. ಅಂದು ಪ್ರಾರಂಭವಾಯಿತು ನಿಜವಾದ ಬಾಲಬಳಗ ಶಿಕ್ಷಣ. ಶಾಲೆಯಲ್ಲಿ ಕಲಿತದ್ದನ್ನು ನಾನು ಆಗ ಪ್ರಯೋಗಿಸಬೇಕಿತ್ತು, ಹಾಗೂ ಆಗಲೇ ನಾನು ಅದನ್ನು ಮಾಡಿದ್ದು. ಈಗ ನಾನು ಹೇಳಲು ಹೊರಟಿರುವುದು ಮೇಲ್ನೋಟಕ್ಕೆ ಕ್ಷುಲ್ಲಕವಾಗಿ ಕಂಡರೂ ವೈಯಕ್ತಿಕವಾಗಿ ಅತೀ ಮಹತ್ವದ್ದು. ಶಾಲೆಯ ಮಾತೃಭಾಷೆ ಶಿಕ್ಷಣ ಹಾಗೂ ಆಂಗ್ಲಭಾಷೆಗೆ ನೀಡಿದ ಮಹತ್ವದಿಂದಾಗಿ, ಕಾಲೇಜಿನಲ್ಲಿ ನನಗೆ ಭಾಷಾಕಲಿಕೆಯಲ್ಲಾಗಲೀ, ವಿಷಯಕಲಿಕೆಗಳಲ್ಲಾಗಲೀ ಯಾವುದೇ ತೊಂದರೆಯಾಗಲಿಲ್ಲ. ಶಾಲೆಯಲ್ಲಿ ಕಾರ್ಯಕ್ರಮ ಸಂಘಟನೆಯಲ್ಲಿ ಭಾಗವಹಿಸಿದ್ದರಿಂದ ಕಾಲೇಜಿನಲ್ಲಿ ಆ ಅವಕಾಶವನ್ನು ಗಿಟ್ಟಿಸಿಕೊಂಡು ಸದಾ ಚಟುವಟಿಕೆಗಳಲ್ಲಿ ನಿರತಳಾಗಿರಲು ಸಾಧ್ಯವಾಯಿತು. ವಕ್ತಿತ್ವವಿಕಸನದ ವರ್ಗಗಳಲ್ಲಿ ಭಾಗವಹಿಸಿದ್ದರಿಂದ ಇವತ್ತಿನ ದಿನದವರೆಗೂ ಧೈರ್ಯದಿಂದ ಮಾತನಾಡಲು ಸಾಧ್ಯವಾಗಿದೆ. ನನ್ನಲ್ಲಿರುವ ದೌರ್ಬಲ್ಯಗಳನ್ನು ಒಪ್ಪಿಕೊಂಡು ಬೆಳೆಯಲು, ಅಂತೆಯೇ ಒಳ್ಳೆಯ ಗುಣಗಳನ್ನು ಇನ್ನಷ್ಟು ವೃದ್ಧಿಸಿಕೊಳ್ಳುವಂತಾಗಿದೆ. ಕಾಲೇಜುಶಿಕ್ಷಣದಲ್ಲಿರುವ ಲೋಪಗಳನ್ನು ಶಾಲೆಯ ಶಿಕ್ಷಣದಿಂದ ತುಂಬಿಕೊಂಡು ಮುನ್ನಡೆಯಲು ಸಹಕಾರಿಯಾಗಿದೆ. ನಾನು ಆಯ್ದುಕೊಂಡಿರುವ ಕ್ಷೇತ್ರದಲ್ಲಿ ಎದುರಾಗುವ ಪ್ರತಿಯೊಂದು ಸವಾಲನ್ನು ಎದುರಿಸಿ ಮುಂದೆ ಸಾಗಬಲ್ಲೆ ಎಂಬ ಆತ್ಮವಿಶ್ವಾಸ ಚಿಗುರಿದೆ. ಪ್ರತಿ ಚಟುವಟಿಕೆಯಲ್ಲೂ ಅದಮ್ಯ ಉತ್ಸಾಹದಿಂದ ಆಶಾವಾದಿಯಾಗಿ ಭಾಗವಹಿಸಲು ಪ್ರೇರಣೆಯಾಗಿದೆ ಬಾಲಬಳಗ. ಅಪರಿಚಿತರು ನನ್ನ ಹಾಡು ಕೇಳಿ ಸಂತೋಷಗೊಂಡಾಗ, ನನ್ನನ್ನು ಭೇಟಿ ಕೂಡ ಆಗದವರು ಕೇವಲ ಮಾತುಗಳಿಂದ ನನ್ನ ವ್ಯಕ್ತಿತ್ವವನ್ನು ಅರಿತು ಮೆಚ್ಚಿದಾಗ, ಕೊಂಚ ಹೆಚ್ಚು ಅಂಕ ಗಳಿಸಿದ್ದಕ್ಕಾಗಿ ಬಾಂಧವರ ಮನಸ್ಸು ಪ್ರಫುಲ್ಲಗೊಂಡಾಗ, ಆ ಅಂಕಗಳನ್ನು ಕಾಲೇಜು ತನ್ನ ಸಾಧನೆ ಎಂದು ತಿಳಿದು ಬೀಗಿದಾಗ, ನನಗೆ ಮಿಶ್ರ ಭಾವನೆಗಳು ಉಂಟಾಗುವವು. ಒಂದೆಡೆ ಅತ್ಯಂತ ಹೆಮ್ಮೆ ಮನೆ ಮಾಡಿದರೆ ಮತ್ತೊಂದೆಡೆ ಒಳಗೊಳಗೇ ನಗು. ಜನರ ಮುಗ್ಧತೆಯನ್ನು ಕಂಡು ನಾನು ನಗಬಲ್ಲೆ ಅಷ್ಟೇ.

ಮೇಲೆ ಹೇಳಿದ ಸಂಗತಿಗಳಲ್ಲಿ ನನಗೆ ನೀಡಿದ ಅಥವಾ ತಮಗೆ ಕೊಟ್ಟುಕೊಂಡ ಗೌರವ, ಶ್ರೇಯಸ್ಸು ಸಲ್ಲಬೇಕಾದದ್ದು ಬಾಲಬಳಗಕ್ಕೆ 'ಮಾತ್ರ'. ಈ ಎಲ್ಲದರ ಹಿಂದಿರುವುದು "ಬಾಲಬಳಗ" ಎಂಬ ಹಿರಿಯ ಶಕ್ತಿ ಎನ್ನುವುದು ಜನರಿಗೆ ತಿಳಿಯದು. ಈಗ ಹೇಳಿ... ನಾನು ಬಾಲಬಳಗದ ಶಿಕ್ಷಣವನ್ನು ತೆಗೆದುಕೊಂಡದ್ದು ಮೊದಲಿನ ೧೩ ವರ್ಷಗಳಲ್ಲಿಯೋ ಅಥವಾ ಕಳೆದ ಎರೆಡೂವರೆ ವರ್ಷಗಳಲ್ಲಿಯೋ??








ಪ್ರತಿಭಾ ಕುಲಕರ್ಣಿ

ಪ್ರಾಂಶುಪಾಲರು
samprati.kul@gmail.com


# ಶಿಕ್ಷಕರ ಮಾತು

ವರ್ಷದಲೊಮ್ಮೆ'ಶಿಕ್ಷಕರ ದಿನ '
ಆಚರಿಸುವೆವು ಕೊಡಲವರಿಗೆ ಉನ್ನತಸ್ಥಾನ
ಆದರೆ ತರಗತಿಗಳಲ್ಲಿ ನಡೆವುದೆಂದು
ಇಡೀ ವರ್ಷದನುದಿನ?

ಇರುವುದು ಶಿಕ್ಷಕ ವೃತ್ತಿಯ ಉದ್ದೇಶ ಘನ
ಇದಕೆ ಕಾರಣರು ಅವರೇ ರಾಧಾಕೃಷ್ಣನ್
ಅದಕೆಂದೇ ಸಲ್ಲಿಸುವರು ಶಿಕ್ಷಕರಿಗೆ ನಮನ
ಆದರಾಗುತ್ತದೆಯೇ ಈ ಉದ್ದೇಶ ದರ್ಶನ ?

ಶಿಕ್ಷಕ ವೃತ್ತಿಗೆ ಸೇರಿದವರ ಉದ್ದೇಶವೇನೋ ಎಂತೋ ?
ಅವರ ನಡವಳಿಕೆ ಮಕ್ಕಳೊಂದಿಗೆ ಹೇಗೋ ಏನೋ?
ಅವರ ಹಿನ್ನೆಲೆ,ಅನುಭವಗಳು ಗೊತ್ತು ಯಾರಿಗೋ ?
ಶಿಕ್ಷಕರು ನೀಡುವ ಕಿರುಕುಳವೇ ಪತ್ರಿಕೆಗೆ ವಿಷಯವೋ?

ಹೀಗಾಗಿ ಇಂತಹ ಹಲವರ ಬಗೆಗೆ ಅನುಮಾನ
ಪ್ರಶ್ನೆ ಹುಟ್ಟುತ್ತದೆ ಹೇಗೆ ಸಲ್ಲಿಸುವದು ನಮನ
ಶಿಕ್ಷಕರಿಗೆ ಏನು ಕಲಿಸಿದೆ ಅವರು ಪಡೆದ ಶಿಕ್ಷಣ
ಉತ್ತರಿಸಬೇಕಿದೆ  ನಾವೇ ಶಿಕ್ಷಕರು ಯೋಚಿಸಿ ಗಹನ..

ಶಿಕ್ಷಕರ ಬೈಗುಳ,ಏಟು ತಪ್ಪಲ್ಲ ಅಂದು
ಶಿಕ್ಷಕರ ಮಾತು ಕೂಡ ತಪ್ಪು ಎಂಬ ಸ್ಥಿತಿ ಇಂದು
ಇದರ ನಡುವಿಹುದು ಶಿಕ್ಷಕ ವೃತ್ತಿಯ  ನೌಕೆ
ತೇಲುವುದೋ ಇಲ್ಲ ಮುಳುಗುವುದೋ ಇದು ಭಾರಕೆ.

ಹೀಗೆ ಮೂಡಿವೆ ಹಲ ಪ್ರಶ್ನೆಗಳು ಶಿಕ್ಷಕರ ಮನದಲ್ಲಿ
ಇವುಗಳಿಗೆ ಉತ್ತರವನು ಹುಡುಕುವದು ಎಲ್ಲೆಲ್ಲಿ
ಎಂಬುದಕೆ ಸಿಗಲೇಬೇಕು ಉತ್ತರ ನಾವ್ ಶಿಕ್ಷಕರಲ್ಲಿ
ಶಿಕ್ಷಕರ ಉಳಿವಿದೆ ಮಕ್ಕಳ ಭವಿಷ್ಯದಲ್ಲಿ.

ಆದರೂ ಮಕ್ಕಳಿಗೊಂದು ಕಿವಿಮಾತು
ಕಲಿಸಲು ಬಂದ ಶಿಕ್ಷಕರಿಗೆ ಕೊಡಿರೊಂದು ಮಾತು
ವರ್ಷವಿಡೀ  ಕಾಡಿ ಸಪ್ಟೆಂಬರ್ ೫ ಕ್ಕೆಂದೇ ಕಾದುಕೂತು
ಶಿಕ್ಷಕರ ದಿನ ಎಂದಾಚರಿಸುವುದರಲ್ಲಿ ಅರ್ಥವೇನುಳಿಯಿತು?

ಬೇಡ ನಮಗೆ ಒಂದೇ ದಿನದ ಖುಷಿ
ವರ್ಷವಿಡೀ  ನಗಲಿ ಶಿಕ್ಷಕರು ನಿಮ್ಮ ಹರಸಿ
ನೀವಿಲ್ಲದೇ ನಾವಿಲ್ಲ
ನಾವಿಲ್ಲದೇ ನೀವಿಲ್ಲ ಎಂಬ ಮಾತು ತಿಳಿಸಿ
ಮುಗಿಸುವೆ ನನ್ನ ಮಾತು ನಿಮಗೆ ಧನ್ಯವಾದ ಅರ್ಪಿಸಿ

ಶುಭವಾಗಲಿ ಒಳಿತಾಗಲಿ ಜಯವಾಗಲಿ ನಿಮಗೆ
ನೀವೇ ಭದ್ರ ಬುನಾದಿ ಈ ಭಾರತ, ಭೂಮಿಗೆ
ಸಮಸ್ತ ಭುವಿ ರಕ್ಷಣೆ ಇಹುದು ನಿಮ್ಮ ಪಾಲಿಗೆ
ಇಂದು ಮುಂದು ಎಂದೆಂದೂ ಯಶ ಸಿಗಲಿ ನಿಮಗೆ

ಇದು ಎಲ್ಲ ಶಿಕ್ಷಕರ ಹರಕೆ.

೧೦ ನೆಯ ತರಗತಿಯ ಮಕ್ಕಳೊಡನೆ ಚರ್ಚಿಸಿದ ನಂತರದ ಪ್ರಯತ್ನ
ಅವರಿಗೆ ಧನ್ಯವಾದಗಳು.



ವರ್ಷಾ.ಅ.ಕ
೧೦ನೇ ತರಗತಿ

ಭೂಮಿಯ ನೀರು ಆವಿಯಾಗಿ
ಆವಿಯಾದ ನೀರು ಮೋಡವಾಗಿ
ಮೋಡವೆಲ್ಲವು ಭಾರವಾಗಿ
ಕಾಡಿನಿಂದ ತಂಪು ಸಿಕ್ಕಿತೆಂದು
ಮೋಡವೆಲ್ಲವು ಮಳೆಯನ್ನು ಸುರಿಸಿದವು.

ಪ್ರಾಣಿ , ಪಕ್ಷಿಗಳ ಮನದ
ಹಂಗನು ತಣಿಸಿ
ಕೆರೆ,ಕಟ್ಟೆ, ಬಾವಿಗಳ ತುಂಬಿಸಿ
ಪ್ರವಾಸಿಗನ ಬಾಯಾರಿಕೆಯನ್ನು ತಣಿಸಿತು.

ನದಿ ಜಲಪಾತದಿಂದ ಹರಿದು
ತನ್ನ ತಾಯಿಯನ್ನು ಸೇರಿ
ಪ್ರಕೃತಿ ಸೌಂದರ್ಯವ ಬೆಳೆಸಿ
ಸಂಸ್ಕೃತಿಯ ಹಾಡನ್ನು ಹಾಡಿತು ಮಳೆ.

ಗಂಗಾ ತುಂಗಾ ಕಾವೇರಿಗಳಾಗಿ
ಹರಿದವು ಭಾರತದಲ್ಲಿ
ಎಲ್ಲರ ಮನವನ್ನು ಶಾಂತಗೊಳಿಸಿ
ಕುಣಿಯುತ ,ನಲಿಯುತ ಹರಿಯಿತು ಮಳೆ.







ಗಗನವ ಸೀಳಿ
ಭೂಮಿಯ ಹುಡುಕುತ
ಕೊನೆಗೂ ಗುರಿ ಮುಟ್ಟಿದ
ಮಳೆಯೇ ನಾವು ನಿನಗೆ ಚಿರಋಣಿ.

ರೈತರ ಬೆನ್ನೆಲುಬು
ಮಕ್ಕಳ ಒಡನಾಡಿ
ಮಾನವನ ದಣಿವು ತಣಿಸುವ
ಮಳೆಯೇ ನಾವು ನಿನಗೆ ಚಿರಋಣಿ.


ಭೂಮಿಯ ಗೆಳೆಯ
ಗಾಳಿಯ ಜೊತೆಗಾರ
ಅಗ್ನಿಯ ವೈರಿಯಾದ
ಮಳೆಯೇ ನಾವು ನಿನಗೆ ಚಿರಋಣಿ.

ಗಿಡ ಮರಗಳ ಆಹಾರ
ಜಲಚರಗಳಿಗೆ ಒಡೆಯ
ಭೂಮಿಯ ತಾಪಮಾನ ಕಾಯುವ
ಮಳೆಯೇ ನಾವು ನಿನಗೆ ಚಿರಋಣಿ.



ಪೂಜಾ ಗರಗದ
೧೦ನೇ ತರಗತಿ

Suggested Reading




## ದಿವಾ ಸ್ವಪ್ನ (ಹಗಲುಗನಸು) - ಗಿಜುಭಾಯಿ ಬಧೇಕಾ

ದಿವಾ ಸ್ವಪ್ನ ಪುಸ್ತಕವು ಲಕ್ಷ್ಮೀರಾಮ ಎಂಬ ಶಿಕ್ಷಕನ ಕಾಲ್ಪನಿಕ ಕಥೆಯಾಗಿದೆ. ಸಾಂಪ್ರದಾಯಿಕ ಶಿಕ್ಷಣ ಪದ್ಧತಿಯನ್ನು ತಿರಸ್ಕಾರವಾಗಿ ಕಾಣುತ್ತ, ಮಕ್ಕಳ ಮೇಲೆ ಹೇರಲ್ಪಡುವ ಪಠ್ಯಕ್ರಮದ ವಿರುದ್ಧ ಧ್ವನಿಯೆತ್ತಿದವರು ಗಿಜುಭಾಯಿ ಬಧೇಕಾ.ಅವರ ಪ್ರಯೋಗಗಳ ಸೈದ್ಧಾಂತಿಕ ನಿಲುವು ಮೊಂಟೆಸ್ಸರಿ ಶಾಲೆಗಳ ಮಾದರಿಯಾದರೂ, ಅದು ಇಲ್ಲಿಯ ಪ್ರಾದೇಶಿಕವಾಗಿ ಕಲಿಸಲ್ಪಡುವ ವಿಷಯಗಳನ್ನು ಮತ್ತು ಅದರ ಮಹತ್ವವನ್ನು ಸುಲಭವಾಗಿ ತಿಳಿಹೇಳುತ್ತದೆ.ಶಿಕ್ಷಣದ ಬಗೆಗಿನ ಅವರ ದೃಷ್ಟಿಕೋನ ಮತ್ತು ಪ್ರಯೋಗಗಳ ಅನುಷ್ಠಾನ ಅತ್ಯಂತ ವಿಶೇಷವಾದದ್ದು.

ಈ ಪುಸ್ತಕವು ಮೊದಲು ೧೯೩೨ ರಲ್ಲಿ ಗುಜರಾತಿ ಭಾಷೆಯಲ್ಲಿ ಮುದ್ರಣವಾಗಿತ್ತು. ವಿಪರ್ಯಾಸವೆಂದರೆ ಪ್ರಾಥಮಿಕ ಶಿಕ್ಷಣ ಪದ್ಧತಿಯಲ್ಲಿ ಬದಲಾವಣೆ ತರಲು ನಡೆದಿರುವ ಪ್ರಯತ್ನ ಬಹಳಷ್ಟು ಹಿಂದಿನದಾದರೂ ಸುಧಾರಣೆ ಆಗಬೇಕಾದ ಅಂಶಗಳು ಇನ್ನು ಸಾಕಷ್ಟಿದೆ. ಲಕ್ಷ್ಮೀರಾಮನು ತನ್ನ ಮೇಲಧಿಕಾರಿಗಳಿಂದ ಪರವಾನಗಿ ಪಡೆದುಕೊಂಡು ಶಿಕ್ಷಣದಲ್ಲಿ ಪ್ರಯೋಗಗಳನ್ನು ಮಾಡಲು ಪ್ರಾರಂಭಿಸುತ್ತಾನೆ. ಈ ಪ್ರಯೋಗಗಳಲ್ಲಿ ಅವನಿಗೆ ಸಾಕಷ್ಟು ಎಡರುತೊಡರುಗಳು ಬರುತ್ತವೆ. ಆದರೂ ಅವೆಲ್ಲವನ್ನು ಸರಿದೂಗಿಸಿಕೊಂಡು ಪರಿಹರಿಸುವುದು ಆಕರ್ಷಣೀಯವಾದದ್ದು.

ಗಾಂಧೀ,ರವಿಂದ್ರನಾಥ್ ಟ್ಯಾಗೋರ್, . ಗಿಜುಭಾಯಿ ಬಧೇಕಾ ಎಲ್ಲರೂ ಶಿಕ್ಷದಲ್ಲಿ ಆಗಬೇಕಾದ ಬದಲಾವಣೆಗಳ ಕುರಿತು ಚಿಂತಿಸಿದ್ದಾರೆ. ಮಕ್ಕಳು ಸಹಜವಾಗಿ ಮತ್ತು ಸ್ವತಂತ್ರವಾಗಿ ಇರುವ ವಾತಾವರಣದಿಂದ ಕಲಿಕೆ ಸಾಧ್ಯವೇ ವಿನಃ ಪಠ್ಯಕ್ರಮ,ಶಿಕ್ಷೆಯಿಂದಲ್ಲ. ಈ ರೀತಿಯ ಆಶಯವನ್ನು ಇಟ್ಟುಕೊಂಡೇ  ಬಾಲಬಳಗವು ಪ್ರಾರಂಭವಾದದ್ದು. ನಮ್ಮ ಬಹುಪಾಲು ಶಿಕ್ಷಕರು ಈ ಪುಸ್ತಕವನ್ನು ಓದಿರುವರು. ಗಿಜುಭಾಯಿ ಬಧೇಕಾ ಅವರು  ಬರೆದ ಇತರ ಪುಸ್ತಕಗಳನ್ನೂ ಓದಬೇಕೆಂಬುದು ನಮ್ಮ ವಿನಂತಿ. ನೀವೂ ಈ ಪುಸ್ತಕವನ್ನು ಓದಬೇಕೆಂಬುದು ನಮ್ಮ ಆಶಯ.





Suggested Movie

## ಲಗೇ ರಹೋ ಮುನ್ನಾ ಭಾಯಿ

ರಾಜಕುಮಾರ ಹಿರಾನಿ ಮತ್ತು ವಿಧು ವಿನೋದ ಚೋಪ್ರಾ ನಿರ್ದೇಶನದ, ೨೦೦೬ರಲ್ಲಿ ತೆರೆಕಂಡ ಹಾಸ್ಯಚಲನಚಿತ್ರ" ಲಗೇ ರಹೋ ಮುನ್ನಾಭಾಯಿ".ಇದು ಮುನ್ನಾಭಾಯಿ MBBS ನ ಮುಂದಿನ ಭಾಗ.ಈ ಚಿತ್ರದಲ್ಲಿ ಮುನ್ನಾಭಾಯಿ ಗಾಂಧೀಜಿಯವರ ಆತ್ಮವನ್ನು ನೋಡಲಾರಂ-ಭಿಸುತ್ತಾನೆ. ಗಾಂಧೀಜಿಯವರ ಆತ್ಮದೊಂದಿಗೆ ನಡೆಸುವ ಸಂವಾದಗಳಿಂದ ಆತ ಸಾಮಾನ್ಯ ಜನರ ಸಮಸ್ಯೆಗಳನ್ನು ನಿವಾರಿಸುವ ಬಗೆಯನ್ನು ಕಂಡುಕೊಳ್ಳುತ್ತಾನೆ. ಈ ಚಲನಚಿತ್ರದಲ್ಲಿ ಗಾಂಧೀಜಿ ಒಂದು ಪಾತ್ರವಾಗಿ ಕಂಡರೂ ಪ್ರತಿಯೊಬ್ಬ ಮನುಷ್ಯನಲ್ಲಿಯೂ ಇರುವ ಒಳ್ಳೆಯತನದ ಪ್ರತಿಬಿಂಬವಾಗಿದೆ. ಈ ಚಿತ್ರ ವಿಮರ್ಶಕರ ಮೆಚ್ಚುಗೆಯನ್ನು ಹಾಗೂ ಹಲವು ಚಿತ್ರೋತ್ಸವಗಳಲ್ಲಿ ಪ್ರದರ್ಶನಗಳನ್ನು ಕಂಡಿದೆ. ಇದು ೪ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳೊಂದಿಗೆ ಹಲವು ಪ್ರಶಸ್ತಿಗಳನ್ನು ಪಡೆದಿದೆ."ಲಗೇ ರಹೋ ಮುನ್ನಾ ಭಾಯಿ "ವಿಶ್ವಸಂಸ್ಥೆಯಲ್ಲಿ ಪ್ರದರ್ಶನಗೊಂಡ ಮೊದಲ ಹಿಂದಿ ಚಿತ್ರವಾಗಿದೆ. ಈ ಚಲನಚಿತ್ರ "ಗಾಂಧಿಗಿರಿ "ಎಂಬ ಪದವನ್ನು ತುಂಬಾ ಜನಪ್ರಿಯಗೊಳಿಸಿತು. ಗಾಂಧೀಜಿ, ಅವರ ವಿಚಾರಗಳು,ದೃಷ್ಟಿಕೋನಗಳು ಈಗಲೂ ಪ್ರಸ್ತುತವೆಂದು ಈ ಚಲನಚಿತ್ರ ತೋರಿಸಿಕೊಡುತ್ತದೆ.ನೋಡಲೇ ಬೇಕಾದ ಹಲವು ಚಿತ್ರಗಳಲ್ಲಿ ಇದೂ ಕೂಡ ಒಂದು.

You can collect it from school. Please bring your pen-drive.

## Suggested Movie




**ಗಾಂಧೀ**

೧೯೮೦ ರಲ್ಲಿ ತೆರೆಕಂಡ ಮೋಹನದಾಸ ಕರಮಚಂದ ಗಾಂಧೀಯವರ ಜೀವನಚರಿತ್ರಾಧಾರಿತ ಚಲನಚಿತ್ರ "ಗಾಂಧೀ". ಈ ಚಲನಚಿತ್ರದ ಸಂಭಾಷಣೆ ಜಾನ್ ಬೇಲಿ ಅವರದ್ದು ಹಾಗೂ ನಿರ್ಮಾಣ ಮತ್ತು ನಿರ್ದೇಶನ ರಿಚರ್ಡ ಅಟೆನ್ ಬರೋ ಅವರದ್ದಾಗಿದೆ. ಅಹಿಂಸೆ ಮತ್ತು ಅಸಹಕಾರ ಚಳುವಳಿಯ ಹರಿಕಾರರಾದ ಗಾಂಧೀಯವರನ್ನು ಈ ಚಿತ್ರ ತುಂಬಾ ವಿಶ್ಲೇಷಿಸಿದೆ. ಬೆನ್ ಕಿಂಗ್ಸ್ ಲೇ , ರೋಹಿಣಿ ಹತ್ತಂಗಡಿ ಹಾಗೂ ಹಲವರು ತಾರಾಗಣದಲ್ಲಿದ್ದಾರೆ. ಈ ಚಲನಚಿತ್ರವು ೧೮೯೩ರಲ್ಲಿ ಗಾಂಧೀಜಿಯವರನ್ನು ಆಫ್ರಿಕಾದ ಒಂದು ರೈಲಿನಿಂದ ದಬ್ಬಿದ ಘಟನೆಯಿಂದ ಹಿಡಿದು ೧೯೪೮ ರಲ್ಲಿ ನಡೆದ ಅವರ ಹತ್ಯೆ, ಅಂತ್ಯಸಂಸ್ಕಾರವನ್ನೂ ಒಳಗೊಂಡಿದೆ. ಈ ಚಲನಚಿತ್ರವು ೧೧ ವಿಭಾಗಗಳಲ್ಲಿ ಆಸ್ಕರ ಪ್ರಶಸ್ತಿಗೆ ಚುನಾಯಿತವಾಗಿ,ಅದರಲ್ಲಿ ೮ ರಲ್ಲಿ ಪ್ರಶಸ್ತಿ ಗಳಿಸಿತ್ತು. ಈ ಚಲನಚಿತ್ರ ತಯಾರಿಕೆಯಲ್ಲಿ ೧೮ ಕ್ಕೂ ಹೆಚ್ಚು ವರ್ಷಗಳು ಬೇಕಾದವು ಎಂಬುದು ಆಶ್ಚರ್ಯದ ಸಂಗತಿ.ಗಾಂಧೀಜಿಯ ಪಾತ್ರಕ್ಕೆಂದು ಬೆನ್ ಕಿಂಗ್ಸ್ ಲೇ ತಮ್ಮ ಎಲ್ಲ ಹಲ್ಲುಗಳನ್ನೂ ತೆಗೆಸಿಕೊಂಡಿದ್ದರು. ಇದು ನಟನೆಯ ಪರಿಪೂರ್ಣತೆಯನ್ನು ತೋರಿಸುತ್ತದೆ. ಈ ಚಿತ್ರದ ನಿರ್ದೇಶಕರಾದ ರಿಚರ್ಡ ಅಟೆನ್ ಬರೋ ಅವರು ೨೪ ಆಗಸ್ಟ್ ೨೦೧೪ ರಂದು ನಮ್ಮನ್ನು ಅಗಲಿದ್ದಾರೆ. ರಿಚರ್ಡ ಅಟೆನ್ ಬರೋ ಅವರ ನೆನಪಿಗೆ ಮತ್ತು ಗಾಂಧೀ ಜಯಂತಿ ಪ್ರಯುಕ್ತ ಈ ತಿಂಗಳ ಚಲನಚಿತ್ರ " ಗಾಂಧೀ " ಎಂದು ಆರಿಸಿಕೊಳ್ಳಲಾಗಿದೆ.

You can collect it from school. Please bring your pen-drive.


Mentor’s Corner



I am Varsha Samuel. I am a part of Baalabalaga family as spoken English and communication skills trainer. And these are my fields of interest.

- Painting
- Cooking
- Kitchen gardening
- Photography
- Paper craft (Origami)

Any of you who is interested in any of these, please feel free to call me or drop me an e-mail.

Varsha Samuel

+91 984 454 1744

varshmagic@yahoo.co.in



ಪ್ರೀತಿಯ `ಚಿಗುರು ಚಿಲುಮೆ' ಬಳಗಕ್ಕೆ ಶುಭಾಶಯಗಳು.
ನಿಮ್ಮ ಮೊದಲ ಪ್ರಯತ್ನ ನೋಡಿ ಸಂತಸವಾಯಿತು.
ಚಿಲುಮೆ ಪುಟಿಯಲಿ ನಿರಂತರ.
ಒಂದೆರಡು ಸಣ್ಣ ಸಲಹೆಗಳು:

೧. ಬರಹಗಳನ್ನು ಎರಡು ಕಾಲಂಗಳಲ್ಲಿ ಕಾಣಿಸುವುದು.
೨. ಸಾಮಾನ್ಯ ಕನ್ನಡ ಫಾಂಟುಗಳನ್ನು (ANSI) ಉಪಯೋಗಿಸಿ ವೈವಿಧ್ಯ ತರುವುದು

ಮತ್ತೊಮ್ಮೆ ಶುಭಾಶಯಗಳೊಂದಿಗೆ
ನಿಮ್ಮ ವಿಶ್ವಾಸಿ -ಶಿಹೊಂ

Congratulations for bringing this e-edition of "ಚಿಗುರು ಚಿಲುಮೆ"
Wish all the best for the team in the days to come.
Regards,
-Sunil Honnungur

Nice effort!
Please send it every month.
- Sudheendra Hangal

Oh really a good initiative.
Hope next issue will include some more photos and Cartoons.
Upload all songs of school specially patriotic one.
Best of luck. Go Ahead.
-Vijay Inamdar

ಕೆಲವು ಸಲಹೆಗಳನ್ನು ಈ ಸಂಚಿಕೆಯಲ್ಲಿ ಅಳವಡಿಸಲು ಆಗಿಲ್ಲ.
ಕ್ಷಮೆ ಇರಲಿ.

Congratulations for the new venture, this issue is sweet and nice.
I have got to add suggested movie here-
Wide awake (1998): directed by M Night Shyamalan
- Deepa Jadhav

It's an awesome project. Its come out wonderful too. Keep it up young creative minds. Three cheers to ur effort. If any work from my side to support u let me know. Don't forget to send me next issue. Enjoyed reading it.
ALL THE BEST
- Anupama Dhavale

1.2MB attachment is an overkill! PDF is not the right format for this.Your content should be on the BB website and you should send a notification with some content from the page and a link to the BB page. I had sent a sample of the newsletter from Rishahb's school.
- Jaya Hangal

ನಿಮಗೆಲ್ಲರಿಗೂ ಧನ್ಯವಾದಗಳು!

# ನಮ್ಮ ಬಳಗ


ಸಂಪದಾ ಸಬನೀಸ್


ದೀಪಕ ಪಾಟೀಲ


ಶರತ ಅಂಚಟಗೇರಿ


ಮಿಂಚು

ಮೊದಲ ಸಂಚಿಕೆ ನೋಡಿ ನಮ್ಮ ಬಳಗಕ್ಕೆ ಸೇರಿದ ಶರತನಿಗೆ ಆತ್ಮೀಯ ಸ್ವಾಗತ!

ನಮ್ಮ ಈ ಪುಟ್ಟ ಪ್ರಯತ್ನಕ್ಕೆ ನಿಮ್ಮ ಅನಿಸಿಕೆಗಳು ಮತ್ತು ಮೆಚ್ಚುಗೆಗಳ ಮೂಲಕ ಪ್ರೋತ್ಸಾಹಿಸಿ.
ನೀವು ಕೂಡ ನಮ್ಮ ಜೊತೆ ಯಾವುದಾದರೂ ರೀತಿಯಲ್ಲಿ ಕೈ ಜೋಡಿಸಬಹುದಾದಲ್ಲಿ ತುಂಬಾ ಸಂತೋಷ.
ನಮಗೆ ಮಿಂಚಂಚೆ ಬರೆಯಿರಿ.

chiguruchilume@gmail.com